ದಿನಾಂಕಃ 02.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ನಾನು ಮನುಕುಮಾರ್ ಬಿನ್ ಮಾದವಗೌಡರವರಿಗೆ 6 ಗುಂಟೆ ಜಮೀನು ಮಾರಾಟ ಮಾಡಿದ್ದು ಈ ಸಂಬಂಧ ಕರಾರು ಆಗಿದೆ ಆದರೆ ಕಾರಣಾಂತರಗಳಿಂದ ಕ್ರಯಪತ್ರ ಆಗಿಲ್ಲ. ಆ 6 ಗುಂಟೆ ಜಮೀನಿನಲ್ಲಿ ಮನುಕುಮಾರ್ ರವರು ಮನೆ ಕಟ್ಟಿಕೊಂಡು ವಾಸಿಸುತ್ತಿದ್ದು ಆ ಮನೆ ಸಮಾರು 4 ವರ್ಷ ಹಳೇಯದ್ದು. ಸದರಿ 6 ಗುಂಟೆ ಜಮೀನು ದಾವ ಸ್ವತ್ತಿನ ಉತ್ತರ ದಿಕ್ಕಿಗೆ ಇದೆ. ಸದರಿ 6 ಗುಂಟೆ ಜಮೀನಿನ ನಂತರದಲ್ಲಿ ಮಾದವಗೌಡರವರ ಜಮೀನು ಇದೆ ಎಂದರೆ ಸಾಕ್ಷಿಯು ಆ ಜಮೀನಿನ ಸ್ವಾಧೀನ ಮಾದವಗೌಡರವರ ಬಳಿ ಇದ್ದು ಅದರ ಸ.ನಂ.2 ಹಾಗೂ ಪಹಣಿ ಬೇರೆಯವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನಲ್ಲಿ ನಾಲ್ಕು ದಾರಿ ಇದ್ದು ಅದನ್ನು ನಾವು ನಮ್ಮ ಸ್ವಂತ ಉಪಯೋಗಕ್ಕೆ ಮಾಡಿಕೊಂಡಿದ್ದೇವೆ. ನಾನು ಈ ದಾವೆಯಲ್ಲಿ ಪ್ರತಿವಾದಿ ದಾವ ಜಮೀನಿನ ಸ್ವಾಧೀನ ಪಡೆಯದೇ ರಸ್ತೆ ನಿರ್ಮಾಣ ಮಾಡಲು ಪ್ರಯತ್ನಪಟ್ಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ಈ ಸಂಬಂಧ ನಾನು ನಿಪಿ-8 ರಂತೆ ಕ್ರಿಯಾ ಯೋಜನಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

ನಿಪಿ-8 ರಲ್ಲಿ ಹೊಸ ರಸ್ತೆ ನಿರ್ಮಾಣ ಎಂದು ಇಲ್ಲ ಆದರೆ ಬಿ.ಹೊಸಹಳ್ಳಿ ಮಾದವಗೌಡರವರ ಮನೆಯ ಹಿಂಭಾಗ ರೈತರ ಜಮೀನಿಗೆ ಹೋಗುವ ರಸ್ತೆಯ ಅಭಿವೃದ್ದಿ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-8 ರಲ್ಲಿ ಬರೆದಿರುವ ಮಾದವಗೌಡರವರ ಮನೆ ಎಂದರೆ ನಾನು ಮನುಕುಮಾರ್ ರವರಿಗೆ ಕೊಟ್ಟ 6 ಗುಂಟೆ ಜಾಗದಲ್ಲಿ ಕಟ್ಟಿರುವ ಮನೆ ಎಂದರೆ ಸರಿ. ಆ ಮನೆಯ ಹಿಂದಿನ ರಸ್ತೆ ಎಂದು ನಿಪಿ-8 ರಲ್ಲಿ ಇದೆ ಎಂದರೆ ಸಾಕ್ಷಿಯು ಆ ರೀತಿ ರೈತರ ಜಮೀನಿಗೆ ಹೋಗುವ ರಸ್ತೆ ಎಂದು ಹೊಸದಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಪ್ರತಿವಾದಿ ಪಂಚಾಯಿತಿಯಿಂದ ಅಭಿವೃದ್ದಿ ಪಡಿಸಲಾಗುತ್ತಿತ್ತು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಮಂಜುನಾಥ್ ಮತ್ತು ಇತರರಿಗೆ ಇರುವ 19 ಗುಂಟೆ ಜಾಗ ಹಾಗೂ ಮನುಕುಮಾರ್ ರವರ 6 ಗುಂಟೆ ಜಾಗವನ್ನು ಸೇರಿಸಿ ಬರೆಸಿದ್ದೀರ ಎಂದರೆ ಸಾಕ್ಷಿಯ ಮನುಕುಮಾರ್ ರವರ ಜಮೀನನ್ನು ಹೊರತುಪಡಿಸಿ ಶೆಡ್ಯೂಲ್ ಬರೆಸಲಾಗಿದೆ ಎಂದು ನುಡಿಯುತ್ತಾರೆ.

ದಾವ ಸ್ವತ್ತಿನ ಪೈಕಿ 4 ಎಕರೆ 2 ಗುಂಟೆ ಹೈನು ಪ್ರದೇಶ ಎಂದರೆ ಸರಿ. ಈ ದಾವೆಯನ್ನು 5 ಎಕರೆ 15 ಗುಂಟೆ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಕರಾಬು ಕಳೆದಿರುವುದಾಗಿ ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣದಲ್ಲಿ ಸ್ವಾಧೀನ ಇಲ್ಲದಿದ್ದರೂ ಸಹಾ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ಅಭಿವೃದ್ದಿ ಪಡಿಸುತ್ತಿರುವ ರಸ್ತೆಯನ್ನು ನನ್ನ ಖಾಸಗಿ ರಸ್ತೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನಿನ ಪಶ್ಚಿಮಕ್ಕೆ ಇರುವ ರಸ್ತೆ ಚಕಮಕ್ಕಿಯಿಂದ ಭಾರತೀಬೈಲಿಗೆ ತಲುಪುತ್ತದೆ. ಆ ರಸ್ತೆ ದಾವ ಸ.ನಂ. ನಲ್ಲೇ ಹಾದುಹೋಗುತ್ತದೆ ಎಂದರೆ ಸರಿ. ನಿಪಿ-8 ರಲ್ಲಿ ಕಾಣಿಸಿರುವ ಜಾಗವನೇ ಬಿ.ಹೊಸಹಳ್ಳಿ ಗ್ರಾಮಸ್ಥಳರು ತಾವು ತಮ್ಮ ಜಾನುವಾರುಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಸಾಗಿಸಲು ತಲೆಮಾರಿನಿಂದ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮೂಲತಃ ಬೇಲೂರು ತಾಲ್ಲೂಕಿನ ಹೈರವಳ್ಳಿಯವನು. 2013 ರಲ್ಲಿ ನಾನು ಬಿ.ಹೊಸಹಳ್ಳಿಯಲ್ಲಿ ಕೃಷಿ ಜಮೀನು ಖರೀದಿಸಿ ಬಂದಿದ್ದೇನೆ. ನಾನು ಜಮೀನು ಖರೀದಿಸುವ ಪೂರ್ವದಲ್ಲಿಯೂ ರಸ್ತೆ ಇದ್ದು ಆ ರಸ್ತೆಯನ್ನು ನನ್ನದಾಗಿಸಿಕೊಳ್ಳಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮನುಕುಮಾರ್ ರವರಿಗೆ 6 ಗುಂಟೆ ಜಮೀನನ್ನು ನೋಂದಾಯಿತ ಕರಾರುಪತ್ರದ ಮೂಲಕ ಕೊಟ್ಟಿದ್ದೇನೆ. ಆ ಕಾರರಿನ ದಿನಾಂಕ ನೆನಪಿಲ್ಲ. ಕರಾರಿನಲ್ಲಿ ಏನು ಚೆಕ್ಕುಬಂದಿ ಬರೆಸಿದ್ದೇನೆ ಎಂದು ನೆನಪಿಲ್ಲ. ಮಂಜುನಾಥ್ ಮತ್ತು ಇತರರು ದಾವ ಜಮೀನಿನ ಪಶ್ಚಿಮ ಹಾಗೂ ಉತ್ತರ ದಿಕ್ಕಿಗೆ 13 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಇತರರು ಎಂದರೆ ಚಂದ್ರಯ್ಯ ಮತ್ತು ರಾಮಯ್ಯ ರವರು ಎರಡು ವಾಸದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿ ನಾನು ದಾವ ಜಮೀನಿನ ಸ್ವಾಧೀನ ಪಡೆದುಕೊಳ್ಳುವ ಪೂರ್ವದಲ್ಲೇ ಸದರಿರವರು ಮನೆ ಕಟ್ಟಿಕೊಂಡು ಇದ್ದರು. ಸದರಿರವರ ಹೆಸರಿನಲ್ಲಿ ಪಂಚಾಯಿತಿ ಖಾತೆ ಇದೆ ಎಂದರೆ ಸಾಕ್ಷಿಯು ಪಲ್ಗುಣಿ ಪಂಚಾಯಿತಿ ವ್ಯಾಪ್ತಿಗೆ ಇದ್ದು ನಾನು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. ಮಂಜುನಾಥ್ ರವರು ಒಟ್ಟು 8 ಗುಂಟೆ ಜಮೀನಿನಲ್ಲಿ ಇದ್ದು 5 ಗುಂಟೆ ಜಮೀನನ್ನು ಒತ್ತುವರಿ ಮಾಡಿ ಬೇಲಿ ಹಾಕಿಕೊಂಡಿದ್ದು ಉಳಿದ 3 ಗುಂಟೆ ಜಮೀನಿನಲ್ಲಿ ಕಾಫೀ, ಮೆಣಸು ಮತ್ತು ಸಿಲ್ವರ್ ಕೃಷಿ ಮಾಡಿದ್ದಾರೆ. ನಾನು ಹೇಳಿರುವಂತೆ ಪ್ರತಿವಾದಿ ಪಂಚಾಯಿತಿಯವರು ಯಾವುದೇ ಹೊಸ ರಸ್ತೆ ನಿರ್ಮಾಣ ಮಾಡುತ್ತಿರಲಿಲ್ಲ ಆದರೆ ಹಳೇ ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತಿದ್ದರು ಎಂದರೆ ಸರಿಯಲ್ಲ.

ನಾನು ಈ ಹಿಂದೆ ಮಂಜುನಾಥ್ ರವರ ವಿರುದ್ಧ ದಾವೆ ಸಲ್ಲಿಸುವಾಗ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ ಎಂದು ಹೇಳಿದ್ದೆ ಎಂದರೆ ಸಾಕ್ಷಿಯು ಅದು ವಕೀಲರ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ. ಸ.ನಂ.410/2 ರಲ್ಲಿ ಸಾರ್ವಜನಿಕ ಬಾವಿ ಇದ್ದು ಅದರಲ್ಲಿ ನೀರು ತರಲು ಸಾರ್ವಜನಿಕರು ಹೋಗುತ್ತಾರೆ ಎಂದರೆ ಸಾಕ್ಷಿಯು ಅದು ಖಾಸಗಿ ಬಾವಿಯಾಗಿದ್ದು ದಾವ ಜಮೀನಿನ ದಕ್ಷಿಣದಿಕ್ಕಿನಲ್ಲಿ ಇರುವುದಾಗಿ ಅದು ಪಾಳು ಬಿದ್ದಿದೆ ಎಂದು ನುಡಿಯುತ್ತಾರೆ. ಆ ಬಾವಿ ಈಗಲೂ ಸಹಾ ಸುಸ್ಥಿತಿಯಲ್ಲಿ ಇದ್ದು ಸಾರ್ವಜನಿಕರು ರಸ್ತೆಯ ಮೂಲಕ ನೀರು ತರುತ್ತಾರೆ ಎಂದರೆ ಸರಿಯಲ್ಲ. ಬಾವಿ ಹಾಗೂ ರಸ್ತೆ ಇರುವ ಬಗ್ಗೆ ನ್ಯಾಯಾಲಯದ ಆಯುಕ್ತರ ವರದಿ ಪಡೆಯಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸುಳ್ಳು ವರದಿ ಕೊಟ್ಟರೆ ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಕರ್ತವ್ಯವನ್ನು ಅಡ್ಡಿಪಡಿಸಲು ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ

ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳು ಸ್ಥಳದ ವಸ್ತುಸ್ಥಿತಿ ಬಿಂಬಿಸುತ್ತಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.